ಪ್ರಾಚಾರ್ಯರ ಕಛೇರಿ
ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಘಟಕ ಕಾಲೇಜು
ದಾವಣಗೆರೆ – 577 004
Fax: 08192-233412
Off.: 08192-233414, 250716

ಸಂಖ್ಯೆ:ಯುಬಿಡಿಟಿ: 03 :ಸಿಬ್ಬಂದಿ(1)/2018-19/726

ದಿನಾಂಕ: 30-08-2018

## " ತಿದ್ದುಪಡಿ ಅಧಿಸೂಚನೆ "

ವಿಷಯ :– ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್, ಎಂ.ಸಿ.ಎ., ಎಂ.ಬಿ.ಎ. ಮತ್ತು ಸ್ಕಿಲ್ ಡೆವೆಲಪ್‌ಮೆಂಟ್ ಫ್ಯಾಕಲ್ಟಿ ವಿಭಾಗಗಳ ಅತಿಥಿ ಉಪನ್ಯಾಸಕರ ಆಯ್ಕೆ ಮಾಡಲು ನಿಗಧಿಯಾಗಿದ್ದ ಸಂದರ್ಶನದ ದಿನಾಂಕವನ್ನು ಮುಂದೂಡಿರುವ ಬಗ್ಗೆ.

ಉಲ್ಲೇಖ :– ಈ ಕಛೇರಿ ಅಧಿಸೂಚನೆ ಸಂಖ್ಯೆ: ಯುಬಿಡಿಟಿ:03:ಸಿಬ್ಬಂದಿ(1)/2018–19/691, ದಿನಾಂಕ: 28–08–2018

----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಅಧಿಸೂಚನೆಯಲ್ಲಿ ತಿಳಿಸಿದ್ದ ಪ್ರಕಾರ 2018–19 ನೇ ಶೈಕ್ಷಣಿಕ ಸಾಲಿಗಾಗಿ ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕರುಗಳ ನೇಮಕಾತಿಗಾಗಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಮೂಲ ದಾಖಲೆಗಳೊಂದಿಗೆ ಸಂದರ್ಶನಕ್ಕೆ ಹಾಜರಾಗಲು ಉಲ್ಲೇಖಿತ ಅಧಿಸೂಚನೆಯಲ್ಲಿ ತಿಳಿಸಲಾಗಿತ್ತು. ಆದರೆ ಅನಿವಾರ್ಯ ಕಾರಣದಿಂದಾಗಿ ಉಲ್ಲೇಖಿತ ಅಧಿಸೂಚನೆಯಲ್ಲಿ ನಿಗದಿ ಪಡಿಸಲಾಗಿದ್ದ ಸಂದರ್ಶನದ ದಿನಾಂಕಗಳನ್ನು ಮುಂದೂಡಿ ಈ ಕೆಳಕಂಡಂತೆ ಮರು ದಿನಾಂಕಗಳನ್ನು ನಿಗದಿಪಡಿಸಲಾಗಿದೆ.

ಈ ಕೆಳಕಂಡ ವಿಭಾಗಗಳಲ್ಲಿ ಮಾತ್ರ ಅತಿಥಿ ಉಪನ್ಯಾಸಕರ ನೇಮಕಾತಿ ಆಯ್ಕೆಗಾಗಿ ಅಭ್ಯರ್ಥಿಗಳನ್ನು ಸಂದರ್ಶನ ನಡೆಸಲು ಈ ಕೆಳಕಂಡಂತೆ ದಿನಾಂಕಗಳನ್ನು ಮರು ನಿಗದಿಪಡಿಸಲಾಗಿದೆ :–

| ಕ್ರ ಸಂ. | ಸಂದರ್ಶನ ನಡೆಯುವ ವಿವರಗಳು | ಸಂದರ್ಶನದ ದಿನಾಂಕ | ಸಂದರ್ಶನ ನಡೆಯುವ ಸಮಯ |
|---|---|---|---|
| 01 | ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗ | 10–09–2018 ಸೋಮವಾರ | ಬೆಳಗ್ಗೆ 9.00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯವರೆಗೆ |
| 02 | ಎ) ಎಂ.ಸಿ.ಎ. ವಿಭಾಗ<br>ಬಿ) ಎಂ.ಬಿ.ಎ. ವಿಭಾಗ<br>ಸಿ) ಸ್ಕಿಲ್ ಡೆವೆಲಪ್‌ಮೆಂಟ್ ಫ್ಯಾಕಲ್ಟಿ | 10–09–2018 ಸೋಮವಾರ | ಮಧ್ಯಾಹ್ನ 2.00 ಗಂಟೆಯಿಂದ ಎಲ್ಲಾ ಅಭ್ಯರ್ಥಿಗಳ ಸಂದರ್ಶನ ಮುಗಿಯುವವರೆಗೆ. |

ಇನ್ನುಳಿದಂತೆ ಉಲ್ಲೇಖಿತ ಅಧಿಸೂಚನೆಯಲ್ಲಿ ತಿಳಿಸಿರುವಂತೆ ಬೇರೆ ವಿಭಾಗಗಳ ಸಂದರ್ಶನ ಯಥಾ ಪ್ರಕಾರ ನಡೆಯಲಿವೆ ಮತ್ತು ಅಭ್ಯರ್ಥಿಗಳಿಗೆ ಸಂದರ್ಶನಕ್ಕೆ ಹಾಜರಾಗಲು ತರಬೇಕಾಗಿರುವ ಮೂಲ ದಾಖಲೆಗಳ ಬಗ್ಗೆ ಮತ್ತು ಸಂದರ್ಶನಕ್ಕೆ ಹಾಜರಾಗುವ ದಿವಸದಲ್ಲಿ ಬೆಳಗ್ಗೆ 8.00 ಗಂಟೆಗೆ ಮೂಲ ದಾಖಲಾತಿಗಳನ್ನು ಕಾಲೇಜಿನ ಕಛೇರಿಯಲ್ಲಿ ಪರಿಶೀಲನೆಗಾಗಿ ಸಲ್ಲಿಸಲು ಹಾಜರಿರುವಂತೆ ಅಭ್ಯರ್ಥಿಗಳಿಗೆ ನೀಡಿರುವ ಸೂಚನೆಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

30/8/18

ಪ್ರಾಚಾರ್ಯರು,
ವಿಶ್ವವಿದ್ಯಾನಿಲಯ ಬಿ.ಡಿ.ಟಿ. ಇಂಜಿನಿಯರಿಂಗ್ ಕಾಲೇಜು,
ದಾವಣಗೆರೆ – ೫೭೭ ೦೦೪. 30/8/18

ಗೆ,

1) ಮಾನ್ಯ ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ, ಜ್ಞಾನಸಂಗಮ, ಬೆಳಗಾವಿ – ಇವರಿಗೆ ಮಾಹಿತಿಗಾಗಿ ಹಾಗೂ ವಿ.ತಾ.ವಿ.ಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಲಾಗಿದೆ.
2) ಅಧ್ಯಕ್ಷರು, ಸಿಎಸ್ ಅಂಡ್ ಇ ವಿಭಾಗ – ಕಾಲೇಜಿನ ವೆಬ್‌ಸೈಟ್ ನಿರ್ವಹಣಾ ಸಮಿತಿಯ ಅಧ್ಯಕ್ಷರು, ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜು, ದಾವಣಗೆರೆ – ಇವರಿಗೆ ಮೇಲ್ಕಂಡ ಅಧಿಸೂಚನೆಯನ್ನು ಕಾಲೇಜಿನ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಲಾಗಿದೆ.
3) ಎಲ್ಲಾ ವಿಭಾಗಗಳ ಅಧ್ಯಕ್ಷರು / ಮುಖ್ಯಸ್ಥರುಗಳಿಗೆ ಮೇಲ್ಕಂಡ ಅಧಿಸೂಚನೆಯನ್ನು ತಮ್ಮ ವಿಭಾಗದ ಪ್ರಕಟಣಾ ಫಲಕದಲ್ಲಿ ಪ್ರಕಟಿಸಲು ತಿಳಿಸಲಾಗಿದೆ.
4) ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿನ ಮುಖ್ಯ ಪ್ರಕಟಣಾ ಫಲಕಕ್ಕೆ.
5) ಕಛೇರಿ ಪ್ರತಿ.